# ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ಪ್ರವಾಸೋದ್ಯಮದ ಪಾತ್ರ

**ಗೋವರ್ಧನ ಪಿ. ಬಿ.**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿ.

**DOI: https://doi.org/10.5281/zenodo.18008685**

## ABSTRACT:

ಪ್ರಾಚೀನ ಸ್ಮಾರಕಗಳು ಒಂದು ದೇಶದ ಸಂಸ್ಕೃತಿ, ಇತಿಹಾಸ ಮತ್ತು ವೈಶಿಷ್ಟ್ಯಗಳನ್ನು ಪ್ರತಿನಿಧಿಸುವ ಅಮೂಲ್ಯ ಸಂಪತ್ತು. ಅವುಗಳಲ್ಲಿ ನಮ್ಮ ಹಿಂದಿನ ಪೀಳಿಗೆಯ ಜ್ಞಾನ, ಕಲೆ, ಜೀವನಶೈಲಿಯ ಗುರುತುಗಳು ಅಡಗಿಕೊಂಡಿವೆ. ಸ್ಮಾರಕಗಳನ್ನು ರಕ್ಷಿಸುವುದು ಕೇವಲ ಸರ್ಕಾರದ ಕರ್ತವ್ಯವಷ್ಟೇ ಅಲ್ಲ, ಸಮಾಜದ ಸಮಗ್ರ ಜವಾಬ್ದಾರಿಯೂ ಆಗಿದೆ. ಈ ಸಂರಕ್ಷಣೆಯಲ್ಲಿ ಪ್ರವಾಸೋದ್ಯಮದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರವಾಸೋದ್ಯಮವು ಸ್ಮಾರಕಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತದೆ ಮತ್ತು ಅವುಗಳ ಮಹತ್ವವನ್ನು ಪ್ರಪಂಚದಾದ್ಯಂತ ಹರಡುತ್ತದೆ. ಪ್ರವಾಸಿಗರಿಂದ ದೊರೆಯುವ ಆದಾಯವು ಸ್ಮಾರಕಗಳ ಮರುಸ್ಥಾಪನೆ, ನಿರ್ವಹಣೆ ಹಾಗೂ ಅಭಿವೃದ್ಧಿಗೆ ನೆರವಾಗುತ್ತದೆ ಮತ್ತು ಸ್ಥಳೀಯ ಜನರ ನಿರುದ್ಯೋಗ ನಿವಾರಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ. ಜವಾಬ್ದಾರಿಯುತ ಪ್ರವಾಸೋದ್ಯಮವು ಸ್ಮಾರಕಗಳ ಸುತ್ತಲಿನ ಪರಿಸರವನ್ನು ರಕ್ಷಿಸುತ್ತದೆ. ಅಲ್ಲದೇ ಅಲ್ಲಿ ದೊರೆಯುವ ಮಾರ್ಗದರ್ಶಕರು, ವಸ್ತುಸಂಗ್ರಹಾಲಯಗಳು ಹಾಗೂ ಮಾಹಿತಿ ಕೇಂದ್ರಗಳ ಮೂಲಕ ಜನಸಾಮಾನ್ಯರಲ್ಲಿಯೂ ಇತಿಹಾಸ ಮತ್ತು ಸಂಸ್ಕೃತಿಯ ಪರಿಕಲ್ಪನೆ ವೃದ್ಧಿಯಾಗುತ್ತದೆ.

## KEYWORDS:

ಸ್ಮಾರಕಗಳು, ಪ್ರವಾಸೋದ್ಯಮ, ಸಾಂಸ್ಕೃತಿಕ ಪರಂಪರೆ, ಆದಾಯದ ಮೂಲ, ಸಂಸ್ಕೃತಿಯ ಪ್ರಚಾರ.

### ಪ್ರಸ್ತಾವನೆ:

ಅನಾದಿಕಾಲದಿಂದಲೂ ಮನುಷ್ಯ ಆಹಾರ, ವಸತಿ, ಹವಮಾನ ವೈಪರಿತ್ಯದಂತಹ ವಿವಿಧ ಕಾರಣಗಳಿಗಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದ. ಶಿಲಾಯುಗದಿಂದ ಸ್ಥಿರ ನಾಗರಿಕ ಜೀವನಕ್ಕೆ ಕಾಲಿಟ್ಟ ಮೇಲೆ ಮಾನವನ ಜೀವನದಲ್ಲಿ ಹಲವಾರು ಬದಲಾವಣೆಗಳು ಸಂಭವಿಸಿದವು. ಆಹಾರ ಸಂಗ್ರಹಕನಿಂದ ಆಹಾರ ಉತ್ಪಾದಕನಾದ ಮಾನವ ತನ್ನ ನಿರಂತರ ಕುತೂಹಲದ ಸಂಶೋಧನೆಗಳಿಂದ ಜೀವನಮಟ್ಟವನ್ನು ಉತ್ತಮಪಡಿಸಿಕೊಂಡ. ಇದರಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಆಹಾರಕ್ಕಾಗಿ ಅಲೆದಾಡುವುದು ತಪ್ಪಿ ಸ್ಥಿರವಾಗಿ ಒಂದು ಕಡೆ ನೆಲೆನಿಂತ ಮೇಲೆ ಅವನಿಗೆ ಜೀವನದಲ್ಲಿ ಏನೋ ಕೊರತೆ ಕಾಡುವಂತಾಯಿತು. ಕಾರಣ ಮಾನವ ಮೂಲತಃ ಅಲೆಮಾರಿಯಾಗಿದ್ದ, ಅದು ಅವನಿಗೆ ರಕ್ತಗತವಾಗಿತ್ತು ಹಾಗಾಗಿ ಒಮ್ಮೊಮ್ಮೆ ಅವನನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದಾಡಲು ಆ ಭಾವನೆ ಪ್ರೇರೇಪಿಸುತ್ತಿತ್ತು. ಇನ್ನು ಜೀವನದಲ್ಲಿ ನೆಲೆ ಕಂಡುಕೊಂಡು ನೆಮ್ಮದಿಯ ಜೀವನ ಅವನದಾದ ಮೇಲೆ ಈ ಭಾವನೆ ಮತ್ತೆ ಜನ್ಮ ಪಡೆದುಕೊಂಡು ಅವನ ವಿಶ್ರಾಂತ ಸಮಯವನ್ನು ಕಳೆಯಲು ಮತ್ತು ತನ್ನ ಕುತೂಹಲ ತಣಿಸಿಕೊಳ್ಳಲು ಸುತ್ತಮುತ್ತಲಿನ ವಿಶೇಷ ಸ್ಥಳಗಳಿಗೆ ಭೇಟಿ ನೀಡತೊಡಗಿದನು.

ಮಾನವ ಮೂಲತಃ ಪ್ರಕೃತಿ ಆರಾಧಕನಾಗಿದ್ದ, ನಂತರ ತಾನು ಆರಾಧಿಸುವ ನಂಬುವ

ದೈವಗಳಿಗಾಗಿ ತನ್ನ ನೆಲೆಗಿಂತ ವಿಭಿನ್ನವಾದ ಸ್ಮಾರಕಗಳನ್ನು ನಿರ್ಮಿಸತೊಡಗಿದ. ತಾವು ವಾಸ ಮಾಡುವ ಮನೆಗಳಿಗಂತ ಈ ಸ್ಮಾರಕಗಳು ಭಿನ್ನವಾಗಿದ್ದರಿಂದ ಕಾಲಕ್ರಮೇಣ ಕುತೂಹಲದಿಂದ ಅವುಗಳನ್ನು ನೋಡಲು ವಿವಿಧ ಸ್ಥಳಗಳ ಜನಗಳು ಭೇಟಿ ನೀಡತೊಡಗಿದರು. ಈ ಸ್ಮಾರಕಗಳ ಜನಪ್ರಿಯತೆ ಹೆಚ್ಚಾಯಿತು ಕಾಲಕ್ರಮೇಣ ರಾಜ್ಯಗಳು, ಸಾಮ್ರಾಜ್ಯಗಳು ಉದಯಿಸಿ ಮುಂದಿನ ಪೀಳಿಗೆಗೆ ತಮ್ಮ ಗುರುತನ್ನು ಬಿಟ್ಟು ಹೋಗಲು ಇಂತಹ ಹಲವಾರು ಸ್ಮಾರಕಗಳನ್ನು ರಾಜರುಗಳು ನಿರ್ಮಿಸತೊಡಗಿದರು. ಸಾಮ್ರಾಜ್ಯಗಳು ಅವನತಿ ಹೊಂದಿದ ನಂತರ ವಿವಿಧ ಕಾರಣಗಳಿಗಾಗಿ ಇಂತಹ ಸ್ಮಾರಕಗಳು ನಿರ್ಲಕ್ಷ್ಯಕ್ಕೆ ಒಳಗಾಗಿ ಅವನತಿಯ ಹಾದಿಯನ್ನು ಹಿಡಿದವು. ಇತಿಹಾಸದ ಬೆಳವಣಿಗೆಯಿಂದ ಮತ್ತೆ ಜನರಲ್ಲಿ ಐತಿಹಾಸಿಕ ಪ್ರಜ್ಞೆ ಜಾಗೃತಗೊಂಡು ತಮ್ಮ ಪೂರ್ವಜರ ರಚನೆಗಳನ್ನು ಕಣ್ತುಂಬಿಕೊಳ್ಳಲು ಮತ್ತು ಅಭಿಮಾನವನ್ನು ವ್ಯಕ್ತಪಡಿಸಲು ಆ ಸ್ಥಳಗಳಿಗೆ ಭೇಟಿ ನೀಡಲು ತೆರಳಿದಾಗ ಆ ಸ್ಥಳಗಳಲ್ಲಿ ತನ್ನ ಅವಶ್ಯಕತೆಗಳಿಗಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಪ್ರವಾಸಿಗ ತೊಡಗಿದ. ಕಾಲ ಉರುಳಿದಂತೆ ಸ್ಮಾರಕಗಳಿರುವ ಸ್ಥಳೀಯರಿಗೆ ಹಾಗೂ ಸ್ಥಳೀಯ ಆಡಳಿತಗಾರರಿಗೆ ಈ ಸ್ಮಾರಕಗಳಿಂದ ಆದಾಯ ಬರತೊಡಗಿದಾಗ ಇವುಗಳಿಂದ ನಮಗೆ ಲಾಭವಿದೆ ಎಂಬ ಮಹತ್ವದ ಅರಿವಾದಾಗ ಸ್ಥಳೀಯ ಸರ್ಕಾರಗಳು ಮತ್ತು ಸ್ಥಳೀಯರು ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಲು ಮುಂದಾದರು. ಇದು ಪ್ರಾಚೀನ ಸ್ಮಾರಕಗಳ ಉಳಿವು ಮತ್ತು ಬೆಳವಣಿಗೆಗೆ ಕಾರಣವಾಗಿದೆ.

**ಪ್ರವಾಸೋದ್ಯಮದ ಇತಿಹಾಸ:**

ಪ್ರವಾಸೋದ್ಯಮ ಕ್ಷೇತ್ರದ ಕುರಿತು ಐತಿಹಾಸಿಕ ಹಿನ್ನೆಲೆ, ಪ್ರಸ್ತುತ ಪರಿಸ್ಥಿತಿ, ಭವಿಷ್ಯದ ಪ್ರಗತಿ ಕುರಿತು ಸೂಕ್ಷ್ಮ ಮತ್ತು ಸೂಕ್ತ ಅಧ್ಯಯನ ಇಂದಿನ ಜನಾಂಗಕ್ಕೆ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ನಿರ್ವಹಣೆ, ವೈಜ್ಞಾನಿಕತೆ, ಸೈದ್ಧಾಂತಿಕ ಅಧ್ಯಯನಗಳು ನಡೆಯಬೇಕಾಗಿದೆ. ಪ್ರವಾಸೋದ್ಯಮ ಎಂಬ ವಲಯವು ಅಥವಾ ವಿಷಯವು ದಿನೇ ದಿನೇ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಾ ವಿಶ್ವದಲ್ಲಿ ಒಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಲೇ ಇದೆ. ರೋಚಕತೆ, ಅನುಭವ, ಪ್ರವಾಸ ಮಾನವನ ಜೀವನದಲ್ಲಿ ಅವಶ್ಯವಾಗಿದೆ. ಮನುಷ್ಯನ ಕುತೂಹಲ ಕೆರಳಿಸುವ ಪ್ರವಾಸೋದ್ಯಮವು ನಿಖರವಾಗಿ ಬೆಳೆಯುತ್ತಲೇ ಇದೆ. ಇದರ ವ್ಯಾಪ್ತಿಯು ಕುತೂಹಲ, ಅನ್ವೇಷಣೆ, ಶೋಧ, ರೋಚಕತೆ ಮುಂತಾದ ವಿಷಯಗಳ ಫಲವಾಗಿ ಪ್ರವಾಸೋದ್ಯಮ ಬೆಳೆಯುತ್ತದೆ. ಪ್ರವಾಸೋದ್ಯಮ ಬರೀ ಶ್ರೀಮಂತರ ಸೊತ್ತಾಗಿರದೆ ವಿವಿಧ ಸ್ತರಗಳಲ್ಲಿ ಜನರನ್ನು ಆಕರ್ಷಿಸಿ, ಜನ ಸಮುದಾಯದ ವ್ಯಾಪ್ತಿಯನ್ನು ಹೊಂದಿದೆ. ಸಾರಿಗೆ ಸಂಪರ್ಕ ಕ್ರಾಂತಿಯಿಂದಾಗಿ ತಂತ್ರಜ್ಞಾನದ ಆಧುನಿಕ ಯುಗದಲ್ಲಿ ಪ್ರವಾಸೋದ್ಯಮದ ವ್ಯಾಪ್ತಿಯು ನಾಗಾಲೋಟದಲ್ಲಿ ವ್ಯಾಪಿಸುತ್ತಿದೆ. ಹಿರಿಯರು ಹೇಳಿದ ಹಾಗೆ "ಕೋಶ ಓದು ದೇಶ ಸುತ್ತು" ಎಂಬ ತತ್ವದ ಅಡಿಯಲ್ಲಿ ಕೋಶ ಓದಿ ತಿಳಿಯುವ ಜ್ಞಾನಕ್ಕಿಂತ ದೇಶ ಸುತ್ತಿ ಪಡೆಯುವ ಜ್ಞಾನ ವಿಭಿನ್ನ ಮತ್ತು ಪರಿಪಕ್ವ. ಹೀಗೆ ಪ್ರವಾಸೋದ್ಯಮವು ವಿಸ್ತಾರಗೊಂಡಿದೆ.

**ಪ್ರವಾಸೋದ್ಯಮದ ವ್ಯಾಖ್ಯೆಗಳು:**

ಪ್ರವಾಸ, ಪ್ರಯಾಣ ಅಥವಾ ಪಯಣ ಇತ್ಯಾದಿ ಪದಗಳಿಗೆ ಪ್ರತೀಕವಾಗಿ ಇಂಗ್ಲಿಷ್‌ನಲ್ಲಿ ಟ್ರಾವೆಲ್ ಎಂದು ಕರೆಯುತ್ತಾರೆ. ಈ ಟ್ರಾವೆಲ್ ಎಂಬ ಪದ ಫ್ರೆಂಚ್ ಪದ 'ಟ್ರಾವೈಲ್' ಎಂಬ ಪದದಿಂದ ಉತ್ಪತ್ತಿಯಾಗಿದೆ. ಟ್ರಾವೈಲ್ ಎಂದರೆ ಸಂಕಷ್ಟ, ಯಾತನೆ ಎಂದರ್ಥ. ಹಿಂದಿನ ದಿನಗಳಲ್ಲಿ ಸಾರಿಗೆ ವ್ಯವಸ್ಥೆಯು ಇರಲಿಲ್ಲ. ಆದ್ದರಿಂದ ಪ್ರಯಾಣ ಕಷ್ಟವಾಗಿತ್ತು. ಅಪಾಯವನ್ನು ಆಹ್ವಾನಿಸುತ್ತಿತ್ತು. ಈ ಕಾರಣಕ್ಕಾಗಿ ಇದನ್ನು ಸಂಕಷ್ಟ ಎಂದು ಕರೆದರು.

**1. ಹನ್ಸಿಕರ್ ಮತ್ತು ಕ್ರಾಫ್ ರವರ ಪ್ರಕಾರ:**

1942 ರಲ್ಲಿ ಹನ್ಸಿಕರ್ ಮತ್ತು ಕ್ರಾಫ್ ಎಂಬ ವ್ಯಕ್ತಿಗಳು ಪ್ರವಾಸೋದ್ಯಮದ ವ್ಯಾಖ್ಯೆಯನ್ನು ಈ ರೀತಿಯಾಗಿ ಪ್ರಸ್ತಾಪಿಸಿರುವರು: "ಅನಿವಾಸಿಗಳ ಪರ್ಯಟನ ಮತ್ತು ಪ್ರಯಾಣ ಹಾಗೂ ತಂಗುವಿಕೆಗಳಿಂದ ಉಂಟಾದ ಪ್ರಕ್ರಿಯೆ ಸಂಬಂಧಗಳ ಮೊತ್ತವೇ ಪ್ರವಾಸೋದ್ಯಮ" ಎಂದು ವ್ಯಾಖ್ಯಾನಿಸಲಾಗಿದೆ.

**2. ಆಕ್ಸ್‌ಫರ್ಡ್ ಶಬ್ದಕೋಶ:**

ಟೂರಿಸ್ಟ್ ಅಥವಾ ಪ್ರವಾಸಿ ಎಂಬ ಪದ ಕ್ರಿ.ಶ. 1800 ಕ್ಕಿಂತ ಮೊದಲೇ ಬಳಕೆಯಲ್ಲಿತ್ತು. ಟೂರಿಸ್ಟ್ ಎಂಬ ಪದ 19ನೇ ಶತಮಾನದ ನಿಘಂಟಿನ ಪ್ರಕಾರ ಸಂತೋಷ ಅಥವಾ ಕುತೂಹಲಕ್ಕೋಸ್ಕರ ಬೆಳೆಸುವ ಪಯಣ ಎಂದು ವ್ಯಾಖ್ಯಾನಿಸಲಾಗಿದೆ.

**3. ರಾಷ್ಟ್ರಸಂಘ:**

"ಯಾವುದೇ ಒಬ್ಬ ವ್ಯಕ್ತಿ 24 ಗಂಟೆ ತಾನು ನಿತ್ಯವಾಸಿಸುವ ಪ್ರದೇಶ ಅಥವಾ ದೇಶದಿಂದ ಮತ್ತೊಂದು ಪ್ರದೇಶ ಅಥವಾ ದೇಶಕ್ಕೆ ಭೇಟಿ ಕೊಡುವುದೇ ಪ್ರವಾಸ". 1920 ರಲ್ಲಿ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಸಂಸ್ಥೆಯಾದ ರಾಷ್ಟ್ರ ಸಂಘವು ತನ್ನ ಗುರಿ ಮತ್ತು ಉದ್ದೇಶಗಳಲ್ಲಿ ಪ್ರವಾಸದ ವ್ಯಾಖ್ಯಾನವನ್ನು ಈ ಮೇಲಿನಂತೆ ಕೊಡುತ್ತದೆ. ಯಾವುದೇ ಒಬ್ಬ ವ್ಯಕ್ತಿ 24 ಗಂಟೆ ತನ್ನ ವಾಸಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಉದ್ದೇಶ ಸಹಿತ ಅಥವಾ ಉದ್ದೇಶ ರಹಿತ, ಕರ್ತವ್ಯ ಸಹಿತವಾಗಿ ಭೇಟಿ ನೀಡುವುದೇ ಪ್ರವಾಸವಾಗಿದೆ ಎಂದು ತಿಳಿಸುತ್ತದೆ.

**4. ವಿಶ್ವಸಂಸ್ಥೆ:**

"ವಿವಿಧ ಉದ್ದೇಶಗಳಾದ ಬಿಡುವು, ವಿಶ್ರಾಂತಿ, ಆರೋಗ್ಯ, ಅಧ್ಯಯನ, ವ್ಯಾಪಾರ, ವಿಹಾರ, ಕ್ರೀಡೆ, ಧಾರ್ಮಿಕ ಯಾತ್ರೆ ಇತ್ಯಾದಿ ಉದ್ದೇಶಗಳನ್ನು ಹೊಂದಿ ತಾತ್ಕಾಲಿಕ ಭೇಟಿ ನೀಡುವುದೇ ಪ್ರವಾಸ". 1945ರಲ್ಲಿ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಸಂಸ್ಥೆಯಾದ ವಿಶ್ವಸಂಸ್ಥೆಯು ಪ್ರವಾಸದ ವ್ಯಾಖ್ಯಾನವನ್ನು ಈ ಮೇಲಿನಂತೆ ಕೊಡುತ್ತದೆ. ಶಿಕ್ಷಣ, ನಿತ್ಯ ವ್ಯಾಪಾರ, ನಿತ್ಯ ಚಟುವಟಿಕೆಗಳನ್ನು ಹೊರತುಪಡಿಸಿ 12 ತಿಂಗಳಿಗಿಂತ ಹೆಚ್ಚು ವಲಸೆಯಲ್ಲದ ಕನಿಷ್ಠ ತನ್ನ ಸ್ವಂತ ನೆಲೆಯಿಂದ 80 ಕಿಲೋಮೀಟರ್ ಪ್ರಯಾಣವನ್ನು ಮತ್ತು ಒಂದು ಸೀಮಿತ ಉದ್ದೇಶವನ್ನು ಇಟ್ಟುಕೊಂಡು ಪ್ರಯಾಣ ಮಾಡುವುದಾಗಿದೆ ಎಂದು ತಿಳಿಸುತ್ತದೆ.

**5. ವಿಶ್ವಬ್ಯಾಂಕ್:**

"ಮನೋರಂಜನೆ, ವ್ಯಾಪಾರ, ವ್ಯವಹಾರ, ಶಿಕ್ಷಣ, ಸಂಶೋಧನೆ ಹಾಗೂ ವೈದ್ಯಕೀಯ ಸೇವೆಗಾಗಿ ತನ್ನ ನಾಡಿನಿಂದ ಬೇರೆ ನಾಡಿಗೆ ಹೋಗುವುದೇ ಪ್ರವಾಸ". 1960ರಲ್ಲಿ ಅಂತರರಾಷ್ಟ್ರೀಯ ಸಂಸ್ಥೆಯಾದ ವಿಶ್ವಬ್ಯಾಂಕ್ ಪ್ರವಾಸದ ವ್ಯಾಖ್ಯಾನವನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿದೆ. ಈ ಮೇಲಿನ ಹೇಳಿಕೆಯಲ್ಲಿ ಒಂದು ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ತನ್ನ ವಾಸಸ್ಥಳದಿಂದ ಮತ್ತೊಂದು ವಾಸಸ್ಥಳಕ್ಕೆ ಪ್ರಯಾಣ ಬೆಳೆಸುವುದು. ಅಲ್ಲಿ ದೀರ್ಘ ನಿವಾಸಿಯಾಗದೇ ಸ್ವಂತ ಹಣದಲ್ಲಿ ಖರ್ಚು ಮಾಡಿಕೊಂಡು ಅಲ್ಪಾವಧಿಗೆ ವಾಸಮಾಡಿ ಹಿಂದಿರುಗುವವನಾಗಿರುತ್ತಾನೆ ಎಂದು ಸ್ಪಷ್ಟಪಡಿಸುತ್ತದೆ.

**ಪ್ರವಾಸೋದ್ಯಮದ ಮೂಲ:**

**ಪ್ರವಾಸ ಕಥನಗಳು:** ಯಾವುದೇ ದೇಶದ ಇತಿಹಾಸ, ಸಂಸ್ಕೃತಿಯ ಮೌಲ್ಯ, ಅಂಕಿ ಸಂಖ್ಯೆಗಳು, ಪ್ರವಾಸದ ಮಾರ್ಗ, ವೇಳಾಪಟ್ಟಿ, ಸಾರಿಗೆ, ನಕ್ಷೆಗಳ ಮಾಹಿತಿ ನೀಡುತ್ತವೆ.

**ವೈಯಕ್ತಿಕ ದಾಖಲೆಗಳು:** ಪತ್ರಗಳು, ಲೇಖನಗಳು ಮತ್ತು ಮ್ಯಾಗಜಿನ್‌ಗಳು.

**ಮೌಖಿಕ ಮಾಹಿತಿ ದಾಖಲೆಗಳು:** ಪೌರಾಣಿಕ ಕಥೆಗಳು, ಖಾಸಗಿ ಸಂಸ್ಥೆಗಳು, ವಿದೇಶಿ ಪ್ರವಾಸಿಗರ ಬರವಣಿಗೆಗಳು, ಟಾಲೆಮಿ, ಸುಲೈಮಾನ್, ಮಾರ್ಕೊಪೊಲೊ, ನಿಕೆಟಿನ್ ಮುಂತಾದವರ ಬರವಣಿಗೆಗಳು, ಸಮುದ್ರದ ತೀರಗಳ ಬಗ್ಗೆ ಬರೆದಿದ್ದಾರೆ.

**ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಮಾಹಿತಿಗಳು:** ವಾರ್ತಾ ಪ್ರಸಾರ, ಆಕಾಶವಾಣಿ, ಇತರೇ ಅಂತರ್ಜಾಲ ವ್ಯವಸ್ಥೆ ಪ್ರಾಯೋಜಿತ ಕಾರ್ಯಕ್ರಮಗಳು ಪ್ರಮುಖ ಆಧಾರಗಳಾಗಿವೆ. ಪ್ರವಾಸೋದ್ಯಮದ ಅಧ್ಯಯನಕ್ಕೆ ಪ್ರವಾಸೋದ್ಯಮದ ಇತಿಹಾಸ ಅರಿಯುವುದು ಅತೀ ಅವಶ್ಯಕವಾಗಿದೆ. ಪ್ರವಾಸೋದ್ಯಮ ಆಧುನಿಕ ಪರಿಕಲ್ಪನೆ ಅಲ್ಲ. ಅನಾದಿ ಕಾಲದಿಂದಲೂ ಮಾನವನು ಮಾಡುತ್ತಿದ್ದ ಪ್ರಯತ್ನದ ಫಲವಾಗಿದೆ. ಆ ಪ್ರಯತ್ನದ ಪ್ರೇರಣೆಯು ಪ್ರಯಾಣ ಮಾಡಲು ಮತ್ತು ತನ್ನ ವಾಸ ಸ್ಥಳದಿಂದ ಬೇರೆ ಸ್ಥಳಗಳನ್ನು ನೋಡಿಕೊಳ್ಳಲು ಬಳಸಿಕೊಂಡನು.

**ಪ್ರವಾಸೋದ್ಯಮ ಮತ್ತು ಸ್ಮಾರಕಗಳ ಸಂರಕ್ಷಣೆಯ ನಡುವಿನ ಸಂಬಂಧ:**

ಪ್ರಾಚೀನ ಸ್ಮಾರಕಗಳು ದೇಶದ ಇತಿಹಾಸ, ಕಲೆ, ಸಂಸ್ಕೃತಿ ಮತ್ತು ಪರಂಪರೆಯ ಜೀವಂತ ದಾಖಲೆಗಳಾಗಿವೆ. ಇವುಗಳನ್ನು ಉಳಿಸಿ ರಕ್ಷಿಸುವಲ್ಲಿ ಪ್ರವಾಸೋದ್ಯಮವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ.

**ಸ್ಮಾರಕಗಳ ಸಂರಕ್ಷಣೆಯಲ್ಲಿ ಪ್ರವಾಸೋದ್ಯಮದ ಪ್ರಮುಖ ಪಾತ್ರವೆಂದರೆ:**

**ಆರ್ಥಿಕ ಆದಾಯವನ್ನು ಹೆಚ್ಚಿಸುವುದು:**

ಸ್ಮಾರಕಗಳನ್ನು ವೀಕ್ಷಿಸಲು ಆಗಮಿಸುವ ಪ್ರವಾಸಿಗರಿಂದ ವಸತಿ, ಪ್ರವೇಶ ಶುಲ್ಕ, ಮಾರ್ಗದರ್ಶಕ ಸೇವೆಗಳು, ಸ್ಥಳೀಯ ಖರೀದಿ ಮಾರಾಟಗಳಿಂದ ದೊರೆಯುವ ಆದಾಯವನ್ನು ಅಲ್ಲಿನ ಸ್ಮಾರಕಗಳ ಸಂರಕ್ಷಣೆಗೆ ಬಳಸಬಹುದಾಗಿದೆ. ಇನ್ನು ವಿಶ್ವ ಪರಂಪರೆ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಆದಾಯವೇ ಆ ಸ್ಮಾರಕಗಳ ನಿರ್ವಹಣೆಗೆ ಮುಖ್ಯ ಆದಾಯದ ಮೂಲವಾಗಿದೆ.

**ಸ್ಮಾರಕಗಳ ಜಾಗೃತಿ ಮತ್ತು ಅವುಗಳ ಮೌಲ್ಯದ ಅರಿವು:**

ಸ್ಮಾರಕಗಳನ್ನು ವೀಕ್ಷಿಸಲು ಜನರು ಆ ಸ್ಥಳಗಳಿಗೆ ಭೇಟಿ ನೀಡಿದಾಗ ಅದರ ಇತಿಹಾಸ ಮತ್ತು ಮಹತ್ವವನ್ನು ತಿಳಿದುಕೊಳ್ಳುತ್ತಾರೆ. ಇದರಿಂದ ತಮ್ಮ ಪೂರ್ವಜರ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಅವರಲ್ಲಿ ಜಾಗೃತಿ ಮೂಡಿ ಜನರು ಅವುಗಳ ಸಂರಕ್ಷಣೆಗೆ ಸಹಕಾರವನ್ನು ನೀಡುತ್ತಾರೆ.

**ಪ್ರವಾಸೋದ್ಯಮವು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು:**

ಪ್ರವಾಸೋದ್ಯಮದಿಂದ ಸ್ಥಳೀಯರಿಗೆ ಮಾರ್ಗದರ್ಶಕ, ಸಾರಿಗೆ, ಹೋಟೆಲ್, ಸ್ಥಳೀಯವಾಗಿ ತಯಾರಿಸಿದ ಉತ್ಪನ್ನ ಸೇವೆಗಳಲ್ಲಿ ಉದ್ಯೋಗ ಸಿಗುತ್ತದೆ. ಹಾಗಾಗಿ ಸ್ಥಳೀಯರು ತಮ್ಮ ಸ್ಮಾರಕಗಳನ್ನು ಕಾಪಾಡಲು ಹೆಚ್ಚು ಆಸಕ್ತಿಯನ್ನು ವಹಿಸುತ್ತಾರೆ.

**ಸರ್ಕಾರ ಮತ್ತು ಖಾಸಗಿ ಉದ್ಯಮಗಳ ಹೂಡಿಕೆ:**

ಪ್ರವಾಸೋದ್ಯಮ ಬೆಳೆದಂತೆ ಸ್ಮಾರಕಗಳನ್ನು ವೀಕ್ಷಿಸಲು ಹೆಚ್ಚು ಪ್ರವಾಸಿಗರು ಆ ಸ್ಥಳಗಳಿಗೆ ಭೇಟಿ ನೀಡಿದಂತೆ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಅಲ್ಲಿನ ಮೂಲಸೌಕರ್ಯ ಹಾಗೂ ಸ್ಮಾರಕಗಳ ಸಂರಕ್ಷಣೆಗೆ ಹಣ ಹೂಡಲು ಕಾರಣವಾಗುತ್ತದೆ. ಆದ್ದರಿಂದ ಆ ಸ್ಥಳಗಳಲ್ಲಿ

ರಸ್ತೆ, ಸ್ವಚ್ಛತೆ, ಬೆಳಕಿನ ವ್ಯವಸ್ಥೆ, ಭದ್ರತೆ ಮತ್ತಿತರ ವ್ಯವಸ್ಥೆಗಳು ಸುಧಾರಿಸುತ್ತವೆ.

**ಪುನರ್ ನಿರ್ಮಾಣ ಮತ್ತು ತಾಂತ್ರಿಕ ಸಂರಕ್ಷಣೆ:**

ಪ್ರವಾಸಿಗರಿಂದ ಬರುವ ಆದಾಯವನ್ನು ಬಳಸಿ ಅಲ್ಲಿನ ಸ್ಮಾರಕಗಳನ್ನು ರಕ್ಷಿಸುವ, ಪುನರ್ ನಿರ್ಮಾಣ ಮಾಡುವ, ಶಿಲೆಗಳಿಗೆ ಆದ ಹಾನಿಯನ್ನು ಸರಿಪಡಿಸುವ, ಮಳೆಗಾಳಿಗಳಿಂದ ಅವುಗಳನ್ನು ರಕ್ಷಿಸುವ ಮತ್ತು ಅಲ್ಲಿನ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುವ ಕಾರ್ಯವನ್ನು ಕೈಗೊಳ್ಳಬಹುದಾಗಿದೆ. ಹೀಗೆ ಪ್ರವಾಸೋದ್ಯಮ ಸ್ಮಾರಕಗಳ ಸಂರಕ್ಷಣೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಪ್ರವಾಸೋದ್ಯಮದಿಂದ ಸ್ಮಾರಕಗಳ ಸಂರಕ್ಷಣೆಗೆ ಇಷ್ಟೆಲ್ಲ ಅನುಕೂಲಗಳಿದ್ದರೂ ಅದರಿಂದ ಸ್ಮಾರಕಗಳಿಗೆ ಕೆಲವು ಸವಾಲುಗಳು ಸಹ ಇವೆ.

**ಪ್ರವಾಸೋದ್ಯಮದಿಂದ ಉಂಟಾಗುವ ಸವಾಲುಗಳು ಮತ್ತು ನಿಯಂತ್ರಣದ ಅಗತ್ಯತೆ**

ಸ್ಮಾರಕಗಳ ಸಂರಕ್ಷಣೆಗೆ ಪ್ರವಾಸೋದ್ಯಮ ಸಹಾಯಕವಾದರೂ ಪ್ರವಾಸಿಗರು ಹಾಗೂ ಸ್ಥಳೀಯರು ಬೇಜವಾಬ್ದಾರಿಯಿಂದ ನಡೆದುಕೊಂಡರೆ ಅವುಗಳಿಗೆ ಹಾನಿಯೂ ಉಂಟಾಗಬಹುದು. ಏಕೆಂದರೆ ಒಂದೇ ಸ್ಥಳಕ್ಕೆ ಹೆಚ್ಚು ಜನ ಭೇಟಿ ನೀಡಿದರೆ ಸ್ಮಾರಕಗಳ ಮೇಲಿನ ಒತ್ತಡ ಹೆಚ್ಚಾಗುತ್ತದೆ. ಅಲ್ಲದೆ ಬರುವ ಪ್ರವಾಸಿಗರು ಆ ಸ್ಥಳಗಳಲ್ಲಿ ಕಸ, ಶಿಲಾ ಶಾಸನಗಳ ಮೇಲಿನ ಬರಹ, ಸ್ಮಾರಕಗಳಿಗೆ ಹಾನಿ ಉಂಟು ಮಾಡಬಹುದು. ಹಾಗೆ ಅತಿಯಾದ ವ್ಯಾಪಾರೀಕರಣದಿಂದ ಸ್ಮಾರಕಗಳ ಮೂಲ ಶಾಂತಿ–ಸೌಂದರ್ಯಗಳಿಗೆ ಧಕ್ಕೆ ಬರುವುದು. ಹಾಗಾಗಿ ಸ್ಮಾರಕಗಳ ಸಂರಕ್ಷಣೆಗಾಗಿ ನಿಯಂತ್ರಿತ ಪ್ರವೇಶ, ಉತ್ತಮ ಕಸ ನಿರ್ವಹಣೆ, ಮಾರ್ಗದರ್ಶಕ ನಿಯಮಗಳು, ಸ್ಥಳೀಯ ಸಮುದಾಯದಲ್ಲಿ ಜಾಗೃತಿ ಮೂಡಿಸಿ ಸ್ಮಾರಕಗಳ ಸಂರಕ್ಷಣೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದೆ.

**ಸಮಾರೋಪ:**

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪ್ರವಾಸೋದ್ಯಮವು ಸ್ಮಾರಕಗಳ ಸಂರಕ್ಷಣೆಯಲ್ಲಿ ದ್ವಿಮುಖ ಪಾತ್ರವನ್ನು ವಹಿಸುತ್ತದೆ. ಸರಿಯಾದ ಯೋಜನೆ, ಜವಾಬ್ದಾರಿಯುತ ಪ್ರವಾಸೋದ್ಯಮ ಮತ್ತು ಸರ್ಕಾರ ಹಾಗೂ ಸಮುದಾಯದ ಸಹಯೋಗದಿಂದ ಅಮೂಲ್ಯ ಪ್ರಾಚೀನ ಸ್ಮಾರಕಗಳನ್ನು ಉಳಿಸಿ ಮುಂದಿನ ತಲೆಮಾರುಗಳಿಗೆ ಕೊಂಡೊಯ್ಯುವ ಶಕ್ತಿಶಾಲಿ ಸಾಧನ ಪ್ರವಾಸೋದ್ಯಮವಾಗಿದೆ ಎಂದು ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಎಚ್. ಎಲ್. ನಾಗೇಗೌಡ., (2006), 'ಪ್ರವಾಸಿ ಕಂಡ ಇಂಡಿಯಾ' ಐಬಿಎಚ್ ಪ್ರಕಾಶನ ಬೆಂಗಳೂರು.
2. ಕೆ. ಎಸ್. ನಾಗಪತಿ., (2012), 'ಪ್ರವಾಸೋದ್ಯಮ ಅಭಿವೃದ್ಧಿ ಒಂದು ಹೊಸ ಆಯಾಮ'
3. ವಿಜಯಲಕ್ಷ್ಮಿ ಕೆ. ಎಸ್., (2005), 'ಇತಿಹಾಸ ಮತ್ತು ಪ್ರವಾಸೋದ್ಯಮ'
4. ಶೀಲಕಾಂತ ಪತ್ತಾರ., (2018), 'ಬಾದಾಮಿ ಸಾಂಸ್ಕೃತಿಕ ಅಧ್ಯಯನ' ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
5. ಸಿದ್ದಪ್ಪ., ಪ್ರವಾಸೋದ್ಯಮ ಮತ್ತು ಅಭಿವೃದ್ಧಿ ಪಿಎಚ್. ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ.
6. ಮೊರಾಬ ರಮೇಶ್., ಬಾಗಲಕೋಟೆ ಜಿಲ್ಲೆಯ ಪ್ರವಾಸೋದ್ಯಮ ಪಿಎಚ್. ಡಿ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
7. ಸವಿತಾ., ಪ್ರವಾಸಿ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ ಎಂ.ಫಿಲ್ ಕೃತಿ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ ಮಂಗಳೂರು. ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.